**ಸಾಕ್ಷಿಗೆ ದಿನಾಂಕಃ 18.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.MNP ರವರಿಂದಃ**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು, **ಸ್ಥಳ ಪಂಚನಾಮೆಯನ್ನು** ನಿ.ಪಿ.**3** ಎಂದು, **ಕಚ್ಚಾ ನಕ್ಷೆಯನ್ನು** ನಿ.ಪಿ.**4** ಎಂದು, ಅಪಘಾತ ವರದಿಗಳನ್ನು ನಿ.ಪಿ.**5** ಮತ್ತು **6** ಎಂದು, ಗಾಯದ ಪ್ರಮಾಣ ಪತ್ರವನ್ನು ನಿ.ಪಿ.**7** ಎಂದು ಗುರುತಿಸಿದೆ.

3) **ಐ.ಎಂ.ವಿ ಕಾಯ್ದೆ ಕಲಂ 133** ರ ಅಡಿಯಲ್ಲಿ ನೀಡಿರುವಂತಹ **ನೋಟಿಸ್** ಅನ್ನು ನಿ.ಪಿ.**8** ಎಂದು ಮತ್ತು **ಆ ನೋಟಿಸಿಗೆ ನೀಡಿರುವಂತಹ ಉತ್ತರವನ್ನು** ನಿ.ಪಿ.**9** ಎಂದು, ಮತ್ತು ಅಂತಿಮ ವರದಿಯನ್ನು ನಿ.ಪಿ.**10** ಎಂದು

ಗುರುತಿಸಿದೆ.

**ಸೂಚನೆಃ** ನಿ.ಪಿ.1 ರಿಂದ ನಿ.ಪಿ.10 ಎಂದು ಗುರುತು ಆಗಿರುವ ದಾಖಲೆಗಳು ನರಸಿಂಹರಾಜ ಸಂಚಾರಿ ಪೋಲಿಸ್ ಠಾಣೆಯವರು ನೀಡಿರುವಂತಹ ಯಥಾ ನಕಲುಗಳು ಆಗಿವೆ.

4) ಒಟ್ಟು **2** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**11** ಎಂದು ಗುರುತಿಸಿದೆ.

5) ಈಗ ಸಾಕ್ಷಿದಾರರು ತಮ್ಮ ಮೂಲ ಆಧಾರ್ ಕಾರ್ಡ್ ದಾಖಲೆ ಮತ್ತು ಇದೇ ದಾಖಲೆಯ ಫೋಟೋ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಯನ್ನು ಮತ್ತು ಫೋಟೋ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಯನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಯನ್ನು ನಿ.ಪಿ.**12** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

6) **CT scan film** ಅನ್ನು ನಿ.ಪಿ.**13** ಎಂದು ಗುರುತಿಸಿದೆ. ಇದರ ಜೊತೆಗೆ **2** ಫೋಟೋಗಳನ್ನು ಸಹಾ ಹಾಜರುಪಡಿಸಿದ್ದೇನೆ.

**<u>ಈ ಹಂತದಲ್ಲಿ ಮತ್ತೆ ಕೆಲವು ದಾಖಲೆಗಳನ್ನು ಹಾಜರುಪಡಿಸಲು ಸಾಕ್ಷಿದಾರರು ಸಮಯ ಕೇಳಿದ್ದಾರೆ, ಸಮಯ ನೀಡಿದೆ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.